ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 01-11-1970

*<u>ತಂದೆಯ ಸಮಾನ ಅಗುವ ಯುಕ್ತಿಗಳು</u>* (बाप समान बनने की युक्तियाँ)

ಇಂದು ಸಾಹಸಿ ಮಕ್ಕಳ ಸಹಯೋಗಿ ತಂದೆಯ ಪ್ರತ್ಯಕ್ಷ ಪ್ರಮಾಣವನ್ನು ನೋಡುತ್ತಿದ್ದೇವೆ. ಗಾಯನವಿರುವ ಸಾಕಾರ ರೂಪವನ್ನು ನೋಡುತ್ತಿದ್ದೇವೆ. ಒಂದು ಹೆಜ್ಜೆ ಮಕ್ಕಳು ಮುಂದೆ ಬಂದರೆ, ತಂದೆ ಸಾವಿರ ಪಟ್ಟು ದೂರದಿಂದ ಸಮ್ಮುಖದಲ್ಲಿ ಬರುತ್ತಾರೆ. ತಾವು ಎಷ್ಟು ಮೈಲ್ ದೂರದಿಂದ ಬಂದಿರುವಿರಿ ಹಾಗು ಬಾಪ್ ದಾದಾ ಎಷ್ಟು ದೂರದಿಂದ ಬಂದಿದ್ದಾರೆ? ಹೆಚ್ಚು ಸ್ನೇಹಿ ಯಾರು, ಮಕ್ಕಳೋ ಅಥವಾ ತಂದೆಯೋ? ಇದರಲ್ಲಿಯೂ ತಂದೆ ಮಕ್ಕಳನ್ನು ಮುಂದಿಡುತ್ತಾರೆ. ಈಗಲೂ ಈ ಹಳೆಯ ಪ್ರಪಂಚದಲ್ಲಿ ತಂದೆಗಿಂತಲೂ ಹೆಚ್ಚು ಆಕರ್ಷಣೆಯ ವಸ್ತು ಯಾವುದಿದೆ? ಇದು ಹಳೆಯ ಜಗತ್ತು, ಸರ್ವ ಸಂಬಂಧ, ಸಂಪತ್ತು, ಪದಾರ್ಥ ಅಲ್ಪಕಾಲದ್ದು ಮತ್ತು ತೋರಿಕೆಯದು ಎಂದು ಗೊತ್ತಾದ ಮೇಲೆ ಮತ್ತೆ ಏಕೆ ಮೋಸ ಹೋಗುತ್ತೀರಿ? ಅದಕ್ಕೆ ಏಕೆ ಅಂಟಿಕೊಂಡಿರುವಿರಿ? ತಮ್ಮ ಗುಪ್ತಸ್ವರೂಪ ಮತ್ತು ತಂದೆಯ ಗುಪ್ತಸ್ವರೂಪವನ್ನು ಪ್ರತ್ಯಕ್ಷ ಮಾಡಿ ಆಗ ತಂದೆಯ ಗುಪ್ತಕರ್ತವ್ಯವನ್ನು ಪ್ರತ್ಯಕ್ಷ ಮಾಡಬಹುದು. ತಮ್ಮ ಶಕ್ತಿಸ್ವರೂಪ ಪ್ರಖ್ಯಾತವಾಗುವುದು. ಇನ್ನೂ ಗುಪ್ತವಾಗಿದೆ. ಕೇವಲ ಒಂದು ಶಬ್ದವನ್ನು ನೆನಪಿಟ್ಟುಕೊಂಡರೆ ತಮ್ಮ ಗುಪ್ತ ರೂಪವನ್ನು ಪ್ರಾಕ್ಟಿಕಲ್ ನಲ್ಲಿ ತರಬಹುದು, ಅದು ಯಾವ ಶಬ್ದ? ಕೇವಲ “ಅಂತರ" ಶಬ್ದ. ಅಂತರದಲ್ಲಿ ಎರಡೂ ರಹಸ್ಯಗಳು ಬರುತ್ತವೆ. ಅಂತರವೆಂದು ವ್ಯತ್ಯಾಸಕ್ಕೂ ಹೇಳಲಾಗುತ್ತದೆ ಮತ್ತು ಒಳಗೆ ಉದಾಃ ಅಂತರ್ಯಾಮಿ, ಅಂತರ್ಮುಖಿ ಎನ್ನುವುದಕ್ಕೂ ಹೇಳುತ್ತಾರೆ. ಆದ್ದರಿಂದ ಅಂತರ ಶಬ್ದದಿಂದ ಎರಡು ಅರ್ಥಗಳು ಸಿದ್ಧವಾಗುತ್ತವೆ. ಅಂತರ ಶಬ್ದ ನೆನಪಿಗೆ ಬರುವುದರಿಂದ ಇದು ಶ್ರೇಷ್ಠವಾ ಅಥವಾ ಅಲ್ಲವಾ ಎಂದು ಪ್ರತಿಯೊಂದು ಮಾತಿನ ಬೇಧವನ್ನು ನೋಡಬಲ್ಲಿರಿ. ಎರಡನೆಯದು ಆಂತರ್ಯದ ಸ್ಥಿತಿಯಲ್ಲಿ ಇರುವುದರಿಂದ ಅಥವಾ ಆಂತರ್ಯದ ಸ್ವರೂಪದಲ್ಲಿ ಸ್ಥಿತರಾಗಿರುವುದರಿಂದ ತಮ್ಮ ಗುಪ್ತಸ್ವರೂಪ ಪ್ರತ್ಯಕ್ಷವಾಗುವುದು. ಒಂದು ಶಬ್ದವನ್ನು ನೆನಪಿಟ್ಟುಕೊಂಡರೆ ಜೀವನವನ್ನು ಬದಲಿಸಿಕೊಳ್ಳಬಹುದು. ಈಗಿರುವ ಸಮಯದ ಗತಿಗನುಸಾರ ಪಾದಗಳು ಪೃಥ್ವಿಯ ಮೇಲಿರಬಾರದು. ಯಾವ ಪಾದ? ಬುದ್ಧಿ ಎಂಬ ಪಾದ. ಬುದ್ಧಿಯಿಂದಲೇ ಸ್ಮೃತಿಯಾತ್ರೆಯನ್ನು ಮಾಡುತ್ತಿರುವಿರಲ್ಲವೇ? ಫರಿಶ್ತೆಗಳ ಪಾದ ಪೃಥ್ವಿಯ ಮೇಲಿರುವುದಿಲ್ಲ ಎಂಬ ಹೇಳಿಕೆಯಿದೆಯಲ್ಲವೇ? ಹಾಗಾದರೆ ಈಗ ಈ ಬುದ್ಧಿ ಅರ್ಥಾತ್ ಪ್ರಕೃತಿಯ ಆಕರ್ಷಣೆಯಿಂದ ದೂರ ಹೋಗುವುದು ನಂತರ ಯಾವುದೇ ವಸ್ತುವನ್ನು ಕೆಳಗೆ ತರಲು ಸಾಧ್ಯವಾಗುವುದಿಲ್ಲ. ಆಗ ಪ್ರಕೃತಿಗೆ ಅಧೀನರಾಗದೇ ಪ್ರಕೃತಿಯನ್ನು ಅಧೀನ ಮಾಡಬಹುದು. ವಿಜ್ಞಾನಿಗಳು ಪೃಥ್ವಿಯಿಂದ ದೂರ ಹೋಗಲು ಈಗ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಶಾಂತಿಯ ಶಕ್ತಿಯಿಂದ ಈ ಪ್ರಕೃತಿಯ ಆಕರ್ಷಣೆಗೆ ದೂರ, ಬೇಕಾದಾಗ ಆಧಾರ ಪಡೆಯಬೇಕೆ ಹೊರತು ಬೇಕಾದಾಗ ತನ್ನ ಅಧೀನವಾಗುವುದಲ್ಲ. ಇಂತಹ ಸ್ಥಿತಿ ಎಲ್ಲಿಯವರೆಗೆ ಬಂದಿದೆ? ಈಗ ಬಾಪ್ ದಾದಾ ಜೊತೆಗೆ ಕರೆದೊಯ್ಯಲು ಸೂಕ್ಷ್ಮವತನದಲ್ಲಿ ತಮ್ಮ ಕರ್ತವ್ಯ ಮಾಡುತ್ತಿದ್ದಾರೆ ಆದರೆ ಇದೂ ಸಹ ಎಲ್ಲಿಯವರೆಗೆ? ಹೋಗುವುದಂತೂ ತಮ್ಮ ಮನೆಗಲ್ಲವೇ? ಆದ್ದರಿಂದ ಈಗ ಬೇಗನೆ ತಮ್ಮನ್ನು ಉನ್ನತ ಸ್ಥಿತಿಯಲ್ಲಿ ಸ್ಥಿತ ಮಾಡಿಕೊಳ್ಳುವ ಪ್ರಯತ್ನ ಮಾಡಿ. ಜೊತೆಗೆ ಹೋಗುವುದು, ಜೊತೆಗಿರುವುದು ಮತ್ತೆ ಜೊತೆಗೆ ರಾಜ್ಯದಲ್ಲಿ ಬರುವುದು. ಜೊತೆ ಹೇಗೆ ಆಗುವುದು? ಸಮಾನರಾಗುವುದರಿಂದ, ಸಮಾನರಾಗದಿದ್ದರೆ ಜೊತೆ ಹೇಗೆ ಆಗುವುದು? ಎಲ್ಲರೂ ಜೊತೆಗೆ ಹಾರಬೇಕು, ಜೊತೆಗೆ ಇರಬೇಕು. ಇದನ್ನು ಸ್ಮೃತಿಯಲ್ಲಿ ಇಟ್ಟುಕೊಂಡರೆ ತಮ್ಮನ್ನು ಬೇಗನೆ ಸಮಾನ ಮಾಡಿಕೊಳ್ಳಬಹುದು. ಇಲ್ಲವಾದರೆ ಸ್ವಲ್ಪ ದೂರವಿರುವುದು. ಜೊತೆಗಿರುವೆವು, ಜೊತೆಗೆ ನಡೆಯುವೆವು ಮತ್ತು ಜೊತೆಗೆ ರಾಜ್ಯ ಮಾಡುವೆವು ಎಂದು ಪ್ರತಿಜ್ಞೆಯೂ ಇದೆಯಲ್ಲವೇ? ರಾಜ್ಯವಾಳುವ ಸಮಯದಲ್ಲಿ ಕೇವಲ ತಂದೆ ಗುಪ್ತರಾಗುತ್ತಾರೆ, ಹಾಗಾದರೆ ಜೊತೆಗೆ ಹೇಗಿರುವಿರಿ? ಸಮಾನರಾಗುವುದರಿಂದ, ಸಮಾನತೆ ಹೇಗೆ ತರುವಿರಿ? ಸಾಕಾರ ತಂದೆಯ ಸಮಾನ ಆಗುವುದರಿಂದ ಸಮಾನತೆಯನ್ನು ತರಬಲ್ಲಿರಿ. ಈಗ ಬಾಪ್ ದಾದಾ ಎಂದು ಹೇಳುತ್ತೀರಲ್ಲವೇ? ಅವರಲ್ಲಿ ಸಮಾನತೆ ಹೇಗೆ ಬಂದಿತು? ಸಮರ್ಪಣೆಯಿಂದ ಸಮಾನತೆ ಕ್ಷಣದಲ್ಲಿ ಬಂದಿತು. ಇಂತಹ ಸಮರ್ಪಣೆಯ

ಶಕ್ತಿ ಬೇಕು. ಸಮರ್ಪಣೆ ಮಾಡಿದ ಮೇಲೆ ತಮ್ಮ ಅಥವಾ ಅನ್ಯರ ಅಧಿಕಾರ ಸಮಾಪ್ತಿಯಾಗುತ್ತದೆ. ಯಾರಿಗಾದರೂ ಯಾವುದೇ ವಸ್ತುವನ್ನು ಕೊಟ್ಟರೆ ತಮ್ಮ ಅಥವಾ ಅನ್ಯರ ಅಧಿಕಾರ ಸಮಾಪ್ತಿಯಾಗುತ್ತದೆ. ಬೇರೆಯವರು ಅಧಿಕಾರ ತೋರಿಸಿದರೆ ಅವರಿಗೆ ಏನೆಂದು ಹೇಳುತ್ತೀರಿ? ಇದನ್ನು ನಾನು ಸಮರ್ಪಣೆ ಮಾಡಿದ್ದೇನೆ. ಅದೇ ರೀತಿ ಪ್ರತಿಯೊಂದು ವಸ್ತುವನ್ನು ಸರ್ವ ಸಮರ್ಪಣೆ ಮಾಡಿದ ಮೇಲೆ ತಮ್ಮ ಅಥವಾ ಅನ್ಯರ ಅಧಿಕಾರ ಹೇಗೆ ಇರಲು ಸಾಧ್ಯ? ತಮ್ಮ ಅಥವಾ ಅನ್ಯರ ಅಧಿಕಾರ ಇರುವವರೆಗೆ ಸರ್ವ ಸಮರ್ಪಣೆಯಲ್ಲಿ ಕೊರತೆಯಿದೆ ಎಂದು ಸಿದ್ಧವಾಗುತ್ತದೆ. ಆದ್ದರಿಂದ ಸಮಾನತೆ ಬರುವುದಿಲ್ಲ. ಯಾರು ಬಹಳ ಯೋಚಿಸಿ ಸಮರ್ಪಣೆಯಾಗುತ್ತಾರೋ ಅವರ ಫಲಿತಾಂಶ ಈಗಲೂ ಪುರುಷಾರ್ಥದಲ್ಲಿ ಅದೇ ವಿಚಾರ ಎಂದರೆ ಸಂಕಲ್ಪ ವಿಘ್ನ ರೂಪವಾಗುತ್ತದೆ. ತಿಳಿಯಿತೇ? ಒಳ್ಳೆಯದು.

ಅವ್ಯಕ್ತ ಮುರಳಿ 01-11-1970.

***ತಂದೆಯ ಸಮಾನ ಆಗುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಾಹಸವೆಂಬ ಒಂದು ಹೆಜ್ಜೆಯಿಂದ ಸಾವಿರ ಪಟ್ಟು ತಂದೆಯ ಸಹಯೋಗವನ್ನು ಪಡೆದಿದ್ದೇನೆ.

2. ನಾನು ನನ್ನ ಗುಪ್ತ ಸ್ವರೂಪ ಮತ್ತು ತಂದೆಯ ಗುಪ್ತ ಸ್ವರೂಪವನ್ನು ಪ್ರತ್ಯಕ್ಷ ಮಾಡಿ ತಂದೆಯ ಗುಪ್ತ ಕರ್ತವ್ಯವನ್ನು ಪ್ರತ್ಯಕ್ಷ ಮಾಡಿದ್ದೇನೆ.

3. ನಾನು ಪ್ರತಿಯೊಂದು ವಿಷಯವನ್ನು ಯತಾರ್ಥವೋ ಇಲ್ಲವೋ ಎಂಬ ಭೇದ ಮತ್ತು ಅಂತರ್ಮುಖಿ ಆಗುವುದರಿಂದ ನನ್ನ ಗುಪ್ತ ಸ್ವರೂಪವನ್ನು ಪ್ರತ್ಯಕ್ಷ ಮಾಡಿದ್ದೇನೆ.

4. ನನ್ನ ಬುದ್ಧಿ ರೂಪಿ ಪಾದ ಪೃಥ್ವಿಯಿಂದ ಮೇಲಿನ ಸ್ಥಿತಿಯಲ್ಲಿದೆ.

5. ನಾನು ಶಾಂತಿಯ ಶಕ್ತಿಯಿಂದ ಈ ಪ್ರಕೃತಿಯ ಆಕರ್ಷಣೆಗೆ ದೂರವಾಗಿ ಬೇಕಾದಾಗ ಆಧಾರವನ್ನು ಪಡೆಯಬಲ್ಲೆನು.

6. ನಾನು ಇಲ್ಲಿ (ಸಂಗಮಯುಗ) ತಂದೆಯ ಸಮಾನ ತಯಾರಾಗಿ ಅಲ್ಲಿ (ಸತ್ಯಯುಗ) ತಂದೆಯ ಸಮಾನ ರಾಜ್ಯವನ್ನು ಮಾಡುತ್ತಿದ್ದೇನೆ.

7. ನಾನು ಒಂದು ಕ್ಷಣದ ಸಮರ್ಪಣೆಯಿಂದ ತಂದೆಯ ಸಮಾನವಾಗಿ ತಯಾರಾಗಿದ್ದೇನೆ.